
## ಕವಿತೆ



**ರಾಧೇಶ್ ತೋಳ್ಪಾಡಿ**

ಕಲೆ: ಸಂತೊಷ್ ಸಸಿಹಿತ್ಲು

# ಯಾರು ಆಡುವರು ಬಟಾ ಬಯಲಿನಲಿ



ಯಾರು ಆಡುವರು ಬಟಾ ಬಯಲಿನಲಿ
ಏನೆಂಥ ಹುಚ್ಚು ಮಾತು!
ಬಯಲು ಮಕ್ಕಳದು ಮತ್ತೆ ಯಾರದ್ದು
ಎರಡನೆಯ ಮಾತೇ ಇರದು!

ಯಾರು ಯಾರೆಲ್ಲ ಆಡಿ ಹೋಗುವರೊ
ಕಪಿ ಸೈನ್ಯ ಬರುವ ಮುಂಚೆ!
ಇನ್ನು ಯಾರೆಲ್ಲ ಕಾಯುತಿರುವರೋ
ಬಯಲಲ್ಲಿ ಆಡಲಿಕ್ಕೆ!

ಇಲ್ಲಿ ಈಗಷ್ಟೇ ಸರಿದು ಹೋಯ್ತಂತೆ
ಮೆರವಣಿಗೆ ಹಕ್ಕಿಗಳದು!
ಗುಬ್ಬಿ ಕಾಜಾಣ ನವಿಲು ಕೋಗಿಲೆಯ
ಬರವಣಿಗೆ ಹಕ್ಕಿನದ್ದು!

ಇರುವೆ ಹುಳ ಚಿಟ್ಟೆ ಹಾವು ಮೊಲ ಕತ್ತೆ
ಅನ್ನುವುವು ಬಯಲು ನಮದೇ!
ಚೇಳು ಹೆಬ್ಬಾವು ಕೋತಿ ಮುಂಗುಸಿಯು
ಹೊಂಚುತಿವೆ ಮರೆಯಲಿದ್ದೇ!

ಸಂಜೆ ರವಿ ಮಾಮ ಬಯಲ ಸ್ಲೇಟಲ್ಲಿ
ಹಾಕುವನು ತನ್ನ ಸಹಿಯ!
ಇರುಳು ಚಂದ್ರಾಮ ಚಿಕ್ಕಿ ಜತೆ ಬಂದು
ಬೆಳದಿಂಗಳೂಟ ತರುವ!

ಮಂದಮಾರುತನು ಗಂಧಮಾದನದ
ಸೌಗಂಧಿಕಾ ಹೂವು ತಂದು
ಬಂಧು ಬಳಗವಿದು ನನ್ನದೆಂದೆನುತ
ಸುಳಿಯುವನು ಇಲ್ಲಿ ಬಂದು!

ಇರುಳ ವೇಳೆಯಲಿ ಇಲ್ಲಿ ಇಳಿಯುವರು
ನಮ್ಮೆಲ್ಲರೂಹೆ ಮೀರಿ
ಸುಪ್ತರಾಗಿರುವ ಸಪ್ತ ಋಷಿಗಳೂ
ಸಪತ್ನೀಕರಾಗಿ ಸೇರಿ!

ವಿಷಯ ಹೀಗಿರಲು ಬಯಲು ಯಾರದಿದು
ಎಂಬೆಲ್ಲ ಚಿಂತೆ ಏಕೆ?
ಬಯಲು ಎಲ್ಲರದು ಅಲ್ಲ ಯಾರದೂ
ಒಡೆತನದ ಬಿಂಕ ಬೇಕೆ?

ಬಯಕೆ ಭಯ ಮೀರಿ ತೆರೆವ ಹೊಸ ದಾರಿ
ಇರುವ ಬಿಡಿ ನಾವೂ ಬಯಲಾಗಿ!

ಇರಲಿ ಇರುವವರು ಬರಲಿ ಬರುವವರು
ನಾವಿರುವ ತೆರೆದ ಪುಟವಾಗಿ